**Andolana (Kannada Daily)**

Date: Saturday, August 10, 2013 — Page No.5

Edition: Mysore — Language: Kannada

# ಆರ್ಥಿಕತೆ ಹದಗೆಡಿಸುವ ಏಳುಬೀಳು

## ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಟಾಟಾ ಸ್ಟೀಲ್ ಕಂಪನಿಯ ಸಿಇಒ ಕೌಶಿಕ್ ಚಟರ್ಜಿ ಅಭಿಮತ

ಮೈಸೂರು,ಆ.೯–ನಾವಿಂದು ಸಂಪರ್ಕ ಪ್ರಪಂಚದಲ್ಲಿ ಬದುಕುತ್ತಿದ್ದು, ಒಂದು ದೇಶದ ಆರ್ಥಿಕ ಕ್ಷೇತ್ರದಲ್ಲಿ ಆಗುವ ಏಳುಬೀಳುಗಳು ಮತ್ತೊಂದು ದೇಶದ ಆರ್ಥಿಕತೆ ಮೇಲೆ ಪರಿಣಾಮ ಬೀರುತ್ತದೆ ಎಂದು ಟಾಟಾ ಸ್ಟೀಲ್ ಕಂಪನಿಯ ಕಾರ್ಯನಿರ್ವಾಹಕ ನಿರ್ದೇಶಕ ಮತ್ತು ಗ್ರೂಪ್ ಸಿಎಫ್‌ಒ ಕೌಶಿಕ್ ಚಟರ್ಜಿ ಹೇಳಿದರು.



ಮೈಸೂರಿನ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ ಸಂಸ್ಥೆಯಲ್ಲಿ ಹಮ್ಮಿಕೊಂಡಿರುವ ಎರಡು ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಸಿಎಫ್‌ಒ, ಕೌಶಿಕ್ ಚಟರ್ಜಿ, ಎನ್.ಆರ್.ಪರಶುರಾಮ್, ಡಾ.ಉಲ್ಲಾಸ್ ರಾವ್ ಮತ್ತಿತರರು ಭಾಗವಹಿಸಿದ್ದರು.

ನಗರದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್(ಎಸ್‌ಡಿಎಂಐಎಂಡಿ) ಸಂಸ್ಥೆಯಲ್ಲಿ 'ಹಣಕಾಸು ಮತ್ತು ಲೆಕ್ಕ ಪರಿಶೋಧನೆಯಲ್ಲಿ ಉದಯವಾಗುತ್ತಿರುವ ಪ್ರವೃತ್ತಿಗಳು' ಎಂಬ ವಿಷಯ ಕುರಿತು ಹಮ್ಮಿಕೊಂಡಿರುವ ಎರಡು ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಅವರು ಮಾತನಾಡಿದರು.

ಪ್ರಸ್ತುತದಲ್ಲಿ ಆರ್ಥಿಕತೆ ಜಗತ್ತಿನಾದ್ಯಂತ ಸಂಪರ್ಕ ಹೊಂದಿದೆ. ಇದರಿಂದ ಒಂದು ದೇಶದ ಆರ್ಥಿಕ ಬೆಳವಣಿಗೆಗಳು ಮತ್ತೊಂದು ದೇಶದ ಮೇಲೆ ಪರಿಣಾಮ ಬೀರಲಿದೆ ಎಂದರಲ್ಲದೆ, ಆರ್ಥಿಕತೆ, ಆಡಳಿತ, ಲೆಕ್ಕ ಪರಿಶೋಧನೆ ಹಾಗೂ ವರದಿ ಇವುಗಳಲ್ಲಿ ಉದಯವಾಗುತ್ತಿರುವ ಪ್ರವೃತ್ತಿಗಳು ವಿಶಾಲ ವ್ಯಾಪ್ತಿ ಹೊಂದಿವೆ ಎಂದು ಹೇಳಿದರು.

ಸಂಸ್ಥೆಗಳ ಆಡಳಿತ ನೀತಿ ಪಾರದರ್ಶಕವಾಗಿದ್ದಲ್ಲಿ ಎದುರಾಗುವ ಬಿಕ್ಕಟ್ಟುಗಳನ್ನು ಸಮರ್ಥವಾಗಿ ನಿಭಾಯಿಸಲು ಸಾಧ್ಯವಾಗುತ್ತದೆ. ಆದರೆ ಇಂದು ಸಂಸ್ಥೆಗಳ ಆಡಳಿತ ನೀತಿಗಳು ಪಾರದರ್ಶಕವಾಗಿಲ್ಲದೆ ಅನೇಕ ಸಮಸ್ಯೆಗಳು ಉದ್ಭವಿಸುತ್ತಿವೆ. ಅಲ್ಲದೆ, ಸಂಸ್ಥೆಗಳ ಲೆಕ್ಕಪರಿಶೋಧನೆ ಆಡಳಿತ ಆಧಾರಿತವಾಗಿರದೇ ತತ್ವಾಧಾರಿತವಾಗಿರಬೇಕು ಎಂದರು.

ಒಂದು ಸಂಸ್ಥೆಯಲ್ಲಿ ಆರ್ಥಿಕ ಬಿಕ್ಕಟ್ಟುಗಳು ಸಂಭವಿಸಿದಾಗ ಅಲ್ಲಿನ ನೌಕರರಿಗೆ ಉದ್ಯೋಗ ಭದ್ರತೆ ಕಡಿಮೆಯಾಗುತ್ತದೆ. ಭಾರತದಲ್ಲಿ ಈ ರೀತಿಯ ಪರಿಸ್ಥಿತಿಗಳು ಹೆಚ್ಚಿದ್ದರೆ, ಪಾಶ್ಚಿಮಾತ್ಯ ದೇಶಗಳಲ್ಲಿ ಈ ಸಮಸ್ಯೆ ಕಡಿಮೆಯಿದೆ. ಆದರೂ ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಪಾಶ್ಚಿಮಾತ್ಯ ದೇಶಗಳಲ್ಲಿಯೂ ಆರ್ಥಿಕ ಬಿಕ್ಕಟ್ಟು ಸಂಭವಿಸಿದಾಗ ಉದ್ಯೋಗ ಭದ್ರತೆ ಕಡಿಮೆಯಾಗುತ್ತಿದೆ ಎಂದು ಹೇಳಿದರು.

ಎಸ್‌ಡಿಎಂಐಎಂಡಿ ನಿರ್ದೇಶಕ ಎನ್.ಆರ್.ಪರಶುರಾಮ್, ಸಮ್ಮೇಳನ ಅಧ್ಯಕ್ಷ ಡಾ.ಉಲ್ಲಾಸ್ ರಾವ್ ಮತ್ತಿತರರು ಹಾಜರಿದ್ದರು.